ಅವಳಿಗೆ ದುಃಖ ಸೀಟಿ ಒಗೆಯುವದು. ಅವಳು ಎಲ್ಲ ಮರೆತು ಕಾಲು ಚಾಚಿಕೊಂಡು ಕಾಳು ಹಸನು ಮಾಡಲು ಕೂತಿದ್ದರೆ ನನಗೆ ಅವಳ ತೊಡೆಯ ಸುಟ್ಟ ಗಾಯಗಳು ಕಣ್ಣೆದುರು ಕಟ್ಟಿದಂತೆ.. ಇದು ನನಗೆ ಬಹಳ ದಿನಗಳವರೆಗೆ ಕಾಡಿತು.

* * *

ಕೆಲವು ವರ್ಷಗಳು ಕಳೆದವು. ನಾನು ಓದಲು ಧಾರವಾಡಕ್ಕೆ ಹೋಗಬೇಕಾಯಿತು. ಅಲ್ಲಿದ್ದಾಗ ನಾನು ಕನಸಿನಲ್ಲಿ ಬಡಬಡಿಸುತ್ತಿರುವುದನ್ನು... ತಾಕ್ರೀ ಎಂದು ಬೆಚ್ಚಿ ಅಬ್ಬರಿಸಿ ಏಳುವುದನ್ನು ಗೆಳೆಯರು ಹೇಳತೊಡಗಿದರು. ಅವಳ ಕುರಿತಾದ ಕನಸುಗಳು ಬೀಳುತ್ತಿದ್ದವಾದರೂ ಅವು ಏನೆಂದು ಅರ್ಥವಾಗುತ್ತಿರಲಿಲ್ಲ. ಆದರೆ ಅವಳನ್ನು ನಾನು ಕಷ್ಟದಿಂದ ಪಾರು ಮಾಡಲು ಯತ್ನಿಸುತ್ತ...ಅದು ನನ್ನಿಂದ ಆಗದೆ ಹತಾಶೆಗೊಂಡು ಅಬ್ಬರಿಸಿ ಏಳುತ್ತಿದ್ದೆ ಎಂಬುದು ಮಾತ್ರ ಅರ್ಥವಾಯಿತು. ಅವತ್ತೊಂದು ದಿನ ವಿಚಿತ್ರವೆನಿಸುವಂತಹ ಕನಸು ಬಿದ್ದಿತ್ತು.

ಆಗಾಧ ಕಡಲು. ಮರಳ ರಾಶಿ. ಏರಿ ಬರುತ್ತಿರುವ ಅಲೆಗಳು. ಅಲೆಗಳ ನಡುವಿನಿಂದ ಕೂಗು. ಅದೋ ತಾಕ್ರೀ ಮುಳುಗುತ್ತಿದ್ದಾಳೆ... ಮತ್ತೆ ಕಿನಾರೆಯ ದೂರದಲ್ಲಿರುವ ಮನೆಯಿಂದ ಕೂಗು... ಅಬ್ಬರ... ಅತ್ತ ಓಡತೊಡಗಿದೆ.ಅಲ್ಲಿ ಬೆತ್ತಲೆ ತೊಡೆಗಳ ಚೆಲ್ಲಿರುವ ತಾಕ್ರೀ ಚೀರುತ್ತಿದ್ದಾಳೆ. ಮತ್ತೆ ಅಜ್ಜ ಅಪ್ಪ ಕಾಕಾ ಚಿಲುಮೆ ಹಿಡಿದು ನಿಂತಿದ್ದಾರೆ. ಮರುದಿನ ಅಜ್ಜ ಹಾಸಿಗೆ ಹಿಡಿದಿದ್ದಾನೆ ಎಂಬ ಸುದ್ದಿ ಬಂದಿತ್ತು. ಬಸ್ಸಿನಲ್ಲಿ ಕೂತವನಿಗೆ ಅಜ್ಜ ಮತ್ತು ತಾಕ್ರೀ ಇಬ್ಬರೂ ಒಟ್ಟೊಟ್ಟಿಗೆ ಕಣ್ಣೆದಿರು ಬಂದರು. ನಾನು ಅಜ್ಜನನ್ನು ಕಾಣಲು ಹೊರಟಿರುವಂತೆಯೆ ತಾಕ್ರೀಯನ್ನು ಕಾಣುವ ಹಂಬಲವೂ ಇದ್ದಿತು. ಊರಿಗೆ ಬಂದಿಳಿದಾಗ ನನಗೆ ಅಚ್ಚರಿ ಕಾದಿತ್ತು.ತಾಕ್ರೀ ಮನೆಯಲ್ಲಿ ಕಾಣಲಿಲ್ಲ. ಇನ್ನೆಂದೂ ಈ ಮನೆಯ ಹೊಸಿಲು ತುಳಿಯುವದಿಲ್ಲ ಎಂದು ನಿರ್ಧರಿಸಿ ಊರು ಬಿಟ್ಟು ಹೊರಟು ಹೋಗಿದ್ದಳು. ಅದಕ್ಕೆ ಕಾರಣವೇನಿರಬಹುದು ಎಂಬುದು ನಿಗೂಢವಾಗಿತ್ತು. ಗಟ್ಟಿಮುಟ್ಟಾಗಿದ್ದ ಅಜ್ಜ ವಯೋಸಹಜವಾಗಿ ಹಾಸಿಗೆ ಹಿಡಿದಿದ್ದಾನೊ ಅಥವಾ ಯಾವುದಾದರೂ ಚಿಂತೆಯಿಂದ ಮಲಗಿದ್ದಾನೊ... ತಾಕ್ರೀ ಮನೆ ಬಿಟ್ಟು ಹೋದ ತರುವಾಯ ಕಾಳಜಿ ಇಲ್ಲದೆ ಹೀಗಾದನೊ... ಅಥವಾ ತಾಕ್ರೀ ಇಲ್ಲವಲ್ಲ ಎಂಬುದು ಅಜ್ಜನನ್ನು ಕಾಡಿತೋ.. ಈ ಯಾವುದೂ ನನಗೆ ಸ್ಪಷ್ಟವಾಗಲಿಲ್ಲ.

ಅಜ್ಜಿ ಪಡಸಾಲೆಯಲ್ಲಿ ಕಾಳು ಹಸನು ಮಾಡುತ್ತ ಕುಳಿತಿದ್ದಳು. ಅಲ್ಲಿ ತಾಕ್ರೀಯ ಗೈರು ಎದ್ದು ಕಾಣುತ್ತಿತ್ತು. ನನ್ನನ್ನು ಕಾಣುತ್ತಲೆ ಅಜ್ಜಿ ಎದ್ದು ಬಂದಳು. ಮನೆಯ ಎಲ್ಲರೂ ಸೇರಿಕೊಂಡರು. ಕುಶಲ ವಿಚಾರಿಸುತ್ತ ಅಜ್ಜನ ಕೋಣೆಗೆ ಹೋದೆವು. ಅಜ್ಜ ನಿದ್ದೆಯಲ್ಲಿರುವಂತೆ ಕಂಡಿತು. ನಾನು ಧಾರವಾಡಕ್ಕೆ ಹೋಗಿ ಮೂರು ವರ್ಷಗಳಾಗಿದ್ದವು. ಇಲ್ಲಿಯ ಸ್ಥಿತ್ಯಂತರಗಳು ನನಗೆ ಅರ್ಥವಾಗಲು ಸಮಯ ಬೇಕಿತ್ತು. ಅಜ್ಜ ನಿತ್ರಾಣನಾಗಿದ್ದ. ಕಣ್ಣುಗಳು ಗುಳಿಬಿದ್ದು ಎದೆಯ ಎಲುಬಿನ ಹಂದರ ಎದ್ದು ಕಾಣತೊಡಗಿತ್ತು. ಮೂರು ವರ್ಷದ ಅವಧಿಯಲ್ಲಿ ಈ ಪರಿ ಅಜ್ಜ ಸೋತು ಹೋಗಿರುವದರ ಹಿಂದೆ ಕೇವಲ ನಿಷ್ಕಾಳಜಿ ಮಾತ್ರ ಕಾರಣವಾಗಿದ್ದಂತೆ ಕಾಣಲಿಲ್ಲ. ಬೇರೆಯೆ ಕಾರಣವಿರುವದು ಅರ್ಥವಾಯಿತಾದರೂ ಏನೆಂಬುದು ಸ್ಪಷ್ಟವಾಗಲಿಲ್ಲ.ಅದು ಮನೆಯವರಿಗೆ ಗೊತ್ತಿರುವಂತೆ ತೋರಿತಾದರೂ ಅವರು ಸಣ್ಣ ವಯಸ್ಸಿನ ನನಗೆ ಹೇಳದವರ ಹಾಗೆ ಕಂಡರು ಮತ್ತು ನಾನೂ ಕೂಡ ಕೇಳದವನಾಗಿದ್ದೆ. ಅದನ್ನು ನಾನೆ ಸ್ಪಷ್ಟಪಡಿಸಿಕೊಳ್ಳಬೇಕಿತ್ತು. ಹೋಗಿ ಅಜ್ಜನ ಕೈ ಮುಟ್ಟಿ ಅಂಗೈಯಲ್ಲಿ ತೆಗೆದುಕೊಂಡೆ. ನಮ್ಮ ಬಿಸಿಯೊಂದಿಗೆ ಆಪ್ತವಾಗಿತ್ತು ಹಸ್ತ. ಅಜ್ಜ ಕಣ್ಣು ತೆರೆದು ನೋಡಿದ. ಕಣ್ಣಲ್ಲಿ ತೇವ. ನನ್ನನ್ನು ತುಂಬಿಕೊಳ್ಳುವಂತೆ ನೋಡಿದ. ಅಜ್ಜಿ ಸೇರಿದಂತೆ ಉಳಿದ ಎಲ್ಲರನ್ನೂ ಹೊರ ಹೋಗುವಂತೆ ಅಜ್ಜ ಸನ್ನೆ ಮಾಡಿದ. ನಾನು ಕದ ಮುಚ್ಚಿ ಬಂದು ಪಕ್ಕ ಕುಳಿತು ನೋಡಿದೆ.

ಅಜ್ಜ ತುಟಿ ಬಿಚ್ಚಿದ. ನಾಲಗೆ ಅಂಗಳಕ್ಕೆ ಅಂಟಿಕೊಂಡು ಆಡಲು ಎಡುವುತ್ತಿತ್ತು. ಅಂತದ್ದರಲ್ಲೆ ಒಂದು ಪದ ನುಡಿದ. ಅದು ತಾಕ್ರೀ... ಅಂತ ಅರ್ಥವಾಯಿತು. ನೀರು ಕುಡಿಸಿದೆ. ಒಂದೆರಡು ಬಾರಿ ಗುಟುಕರಿಸಿ ಮತ್ತೆ ತಾಕ್ರೀ... ಅನ್ನುತ್ತ ದಿಂಬಿನ ಕೆಳಗೆ ಕೈಯಾಡಿಸಿದ. ನಾನು ಸಹಾಯ ಮಾಡಿದೆ. ಕೆಳಗೆ ಐದು ನೂರರ ನಾಲ್ಕು ನೋಟುಗಳಿದ್ದವು. ನನಗೆ ಏನೆಂದು ಅರ್ಥವಾಗಲಿಲ್ಲ. ಅಜ್ಜನಿಗೆ ನನ್ನೆದಿರು ಎಲ್ಲ ಹೇಳಿಕೊಂಡು ಹಗುರವಾಗಬೇಕೆಂಬ ಹಂಬಲವಿದ್ದ ಹಾಗಿತ್ತು. ಆದರೆ ಅವನ ಎದೆಯಲ್ಲಿ ಗಡ್ಡೆಗಟ್ಟಿದ್ದ ಕಫ